# 'ಜನರ ಮನಸಿನಲ್ಲಿ ಉಳಿಯುವ ಪಾತ್ರಕ್ಕೆ ಕಾದಿರುವೆ



**ತನ್ವಿ ಬಾಲರಾಜ್**
ಕಲರ್ಸ್ ಕನ್ನಡದ 'ಅಂತರಪಟ' ಆರಾಧನಾ

◆ **ವೃತ್ತಿಪರ ಡಾನ್ಸರ್ ನಟನೆಗೆ ಒಲಿದಿದ್ದು ಹೇಗೆ?**

ಮಂಡ್ಯ ನನ್ನೂರು. ಸಿವಿಲ್ ಎಂಜಿನಿಯರಿಂಗ್ ಮುಗಿಸಿದ್ದೇನೆ. ವೃತ್ತಿಯಿಂದ ಡಾನ್ಸರ್ ಆಗಿದ್ದೆ. ಏಳೆಂಟು ವರ್ಷಗಳಿಂದ ಡಾನ್ಸ್ ನನ್ನ ಉಸಿರಾಗಿತ್ತು. ಈಗ ನಟನೆಯನ್ನು ಆರಂಭಿಸಿದ್ದೇನೆ. ನನ್ನ ಜೊತೆ ಡಾನ್ಸ್ ತುಂಬ ದೀರ್ಘ ಪ್ರಯಾಣವನ್ನು ಮಾಡಿದೆ. ಒಂದು ರೀತಿಯಲ್ಲಿ ಅದು ಹುಟ್ಟಿನಿಂದ ಬಳುವಳಿ ಎನ್ನಬಹುದು. ಅದನ್ನು ನನಗೆ ಯಾರೂ ಕಲಿಸಿಲ್ಲ. ಅದು ಹೇಗೆ ನನಗೆ ಬೆಸೆದುಕೊಂಡಿದೆ ಅನ್ನುವುದೂ ಗೊತ್ತಿಲ್ಲ. ಅದು ನನಗೆ ತುಂಬ ಸುಲಭ. ಡಾನ್ಸ್ ನನಗೆ ಇಷ್ಟ, ಅದೇ ನನ್ನ ಪಾಲಿಗೆ ಸರ್ವಸ್ವ. ನಟನೆಗೆ ಬಂದಾಗ ಮೂರ್ನಾಲ್ಕು ತಿಂಗಳು ತುಂಬ ಕಷ್ಟ ಆಯಿತು. ಈಗ ಡಾನ್ಸ್‌ನಷ್ಟೇ ನಟನೆಯೂ ಇಷ್ಟ ಆಗ್ತಾ ಇದೆ. ಎರಡೂ ನನಗೆ ಮುಖ್ಯವೆ.

◆ **ಆರಾಧನಾ ಒಳಗೆ ತನ್ವಿ ಇದ್ದಾರೆ ಎಂದು ಅನ್ನಿಸಿದೆಯಾ?**

ಬಹುತೇಕ ಇಬ್ಬರಲ್ಲಿ ಸಾಮ್ಯತೆ ಹೆಚ್ಚಿದೆ. ಆರ್ಥಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲೂ ಅಂತಹ ಅಂತರ ಇಲ್ಲ. ಮಧ್ಯಮವರ್ಗ ಪ್ರತಿನಿಧಿಸುವ ಆರಾಧನಾ ತುಂಬ ಧೈರ್ಯವಂತೆ. ತನ್ವಿಗೆ ಅಷ್ಟು ಧೈರ್ಯ ಖಂಡಿತ ಇಲ್ಲ. ಎಲ್ಲದಕ್ಕೂ ಮೊದಲು ಹಿಂಜರಿಯುವ ಗುಣ ನನ್ನದು. ಯಾವುದೇ ಕೆಲಸ ಎಂದು ಕೈಗೆತ್ತಿಕೊಂಡರೆ ಅದನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಆರಾಧನಾಳಿಂದ ವೈಯಕ್ತಿಕವಾಗಿ ತುಂಬ ಕಲಿತಿದ್ದೇನೆ. ಆಕೆಗೆ ಧನಾತ್ಮಕ ಗುಣಗಳು ಹೆಚ್ಚಿವೆ.

◆ **ಅವಕಾಶಕ್ಕಾಗಿ ನಿಮಗೆ ಯಾರಾದರೂ ಕೇಳಿದರೆ, ಅವರಿಗೆ ಏನು ಹೇಳ್ತೀರಿ?**

ಅವರು ನನಗೆ ಗೊತ್ತಿದ್ದು, ಮಾಡಬಲ್ಲರು ಎಂದೆನಿಸಿದರೆ ಅವರಿಗೆ ಸಾಧ್ಯವಾದಷ್ಟು ಪ್ರೋತ್ಸಾಹಿಸುತ್ತೇನೆ. ಅವರ ವಿವರವನ್ನು ಗೊತ್ತಿದ್ದವರಿಗೆ ಕಳಿಸುತ್ತೇನೆ. ಆಡಿಷನ್ ಇದ್ದಾಗ ತಿಳಿಸುತ್ತೇನೆ. ನಟನೆಗೆ ಸಂಬಂಧಿಸಿದ ತರಗತಿಗೆ ಸೇರಲು ತಿಳಿಸುತ್ತೇನೆ. ನನಗೆ ನಟನೆಯ ಗಂಧಗಾಳಿ ಗೊತ್ತಿಲ್ಲದೆ, ಒಂದಿಷ್ಟು ಕಷ್ಟವನ್ನು ಕಂಡಿದ್ದೇನೆ. ಕಲಿತು ಬಂದರೆ ನಟನೆ ಸುಲಭ ಆಗುತ್ತದೆ. ನಾನು ಎದುರಿಸಿದ ಸವಾಲುಗಳ ಬಗ್ಗೆ ಹೇಳಿ ಅದನ್ನು ಎದುರಿಸುವ ಧೈರ್ಯವನ್ನು ತುಂಬುತ್ತೇನೆ. ನನಗೆ ಪರಿಚಯ ಇಲ್ಲದಿದ್ದರೆ ಅವರಿಗೆ ಗೊತ್ತಿರುವ ಮಾಹಿತಿ ಹಂಚಿಕೊಳ್ಳುವೆ. ಅವರ ನಂಬರ್ ತೆಗೆದುಕೊಳ್ಳುವುದು ಕಷ್ಟ ಆಗಬಹುದು. ಆಡಿಷನ್ ವಿವರ ಸಿಗುವ ಸಾಮಾಜಿಕ ಮಾಧ್ಯಮಗಳ ವಿವರವನ್ನು ನೀಡುತ್ತೇನೆ.

◆ **ದಿಢೀರೆಂದು ಸಿನಿಮಾಕ್ಕೆ ಅವಕಾಶ ಬಂದರೆ ಹೇಗೆ?**

ಸಿನಿಮಾಗಳಿಗೆ ಸಾಕಷ್ಟು ಅವಕಾಶಗಳು ಬಂದಿವೆ. ಅದರಲ್ಲಿ ಎರಡು ಅಂತಿಮ ಹಂತಕ್ಕೆ ತಲುಪುವ ಸಾಧ್ಯತೆ ಇದೆ. ನಾನು ಇನ್ನೂ ಒಪ್ಪಂದಕ್ಕೆ ಸಹಿ ಮಾಡಿಲ್ಲ. ನನ್ನ ಬಗ್ಗೆ ಭರವಸೆ ಇಟ್ಟು ಬಂದಿರುವುದು ನಿಜಕ್ಕೂ ದೊಡ್ಡ ವಿಷಯ. ವೈಯಕ್ತಿಕವಾಗಿ ನನಗೂ ಸಿನಿಮಾರಂಗದಲ್ಲಿ ಬೆಳೆಯಬೇಕು ಎನ್ನುವ ಆಸೆ ಇದೆ. ಒಳ್ಳೆಯ ಪಾತ್ರಗಳನ್ನು ನಿಭಾಯಿಸಬೇಕು. ಪ್ರತಿ ವರ್ಷ ಸಾಕಷ್ಟು ಸಿನಿಮಾಗಳು ಬರುತ್ತವೆ. ಅದರಲ್ಲಿ ತೂಕ ಇರುವ ಪಾತ್ರವನ್ನೇ ಮಾಡಬೇಕು. ಅದು ತಡವಾದರೂ ತೊಂದರೆ ಇಲ್ಲ. ಜನರ ಮನಸಿನಲ್ಲಿ ಕೂರುವಂತಹ ಸಬಲ ಪಾತ್ರಗಳನ್ನು ಮಾಡುವುದು ಇಷ್ಟ.

◆ **ಕಥೆಯನ್ನು ಕಟ್ಟುವ ಅವಕಾಶ ಸಿಕ್ಕರೆ ಹೇಗೆ ಮಾಡ್ತೀರಿ?**

ಕೆಲವೊಂದು ಸಿನಿಮಾಗಳನ್ನು ನೋಡಿದಾಗ, ನನ್ನ ಸುತ್ತಮುತ್ತಲಿನ ಹಲವು ಘಟನೆಗಳು ಅನುಭವಕ್ಕೆ ಬಂದಾಗ ಹೀಗೆ ಬರೆಯಬಹುದು ಎಂದು ಅನ್ನಿಸಿದೆ. ಆದರೆ ಅದು ಕ್ಷಣ ಮಾತ್ರ ಉಳಿದಿದೆ. ದೀರ್ಘಕಾಲ ಬರೆಯಬೇಕು ಎನ್ನುವ ಒತ್ತಡ ಹುಟ್ಟಿಲ್ಲ. ಕಥೆ ಬರೆಯುವ, ನಿರ್ದೇಶನ ಮಾಡುವ ಬಗ್ಗೆ ಯಾವತ್ತೂ ಈ ಬಗ್ಗೆ ಯೋಚನೆಯನ್ನು ಮಾಡಿಲ್ಲ. ಅಂತಹ ಅವಕಾಶ ಬಂದರೆ ಆ ತಕ್ಷಣ ಏನು ಹೇಳುತ್ತೇನೆ ಎನ್ನುವುದೂ ಗೊತ್ತಿಲ್ಲ.

◆ **ಬಣ್ಣದ ಲೋಕದ ನಿಮ್ಮ ಅನುಭವ ಹೇಗೆನಿಸಿದೆ?**

'ಗಿಣಿರಾಮ'ದ ಕಲಾವಿದರಿಗೆ ನಾನು ಡಾನ್ಸ್ ಹೇಳಿಕೊಡ್ತಾ ಇದ್ದೆ. ನಾಯಕ–ನಾಯಕಿಯರು ಸೇರಿದಂತೆ ಸಹಕಲಾವಿದರೂ ಜೊತೆಗಿದ್ದರು. ಅವರ ಜೊತೆ ನಾನೂ ಡಾನ್ಸ್ ಮಾಡ್ತಾ ಇದ್ದೆ. ಅದನ್ನು ಗಮನಿಸಿದವರು, ನಿರ್ದೇಶಕಿ ಸ್ವಪ್ನಾ ಕೃಷ್ಣ ಅವರಿಗೆ ನನ್ನ ವಿವರ ನೀಡಿದ್ದಾರೆ. ಅವರು ಒಮ್ಮೆ ಆಡಿಷನ್‌ಗೆ ಕರೆದರು. ಅದಾದ ಮೇಲೆ ಮೂರ್ನಾಲ್ಕು ಬಾರಿ ಪಾತ್ರಕ್ಕೆ ಪರೀಕ್ಷೆ ನಡೆಸಿದರು. ಪಾತ್ರಕ್ಕೆ ಸೂಕ್ತ ಆಗುತ್ತೀರಿ ಎಂದರು. ಆ ಕ್ಷಣ ನನ್ನ ಕಣ್ಣಲ್ಲಿ ನೀರು ತುಂಬಿತು. ನನಗೆ ಅತ್ಯಂತ ಸಂತೋಷದ ಸಂಗತಿ ಅದಾಗಿತ್ತು. ತಕ್ಷಣವೇ ನನ್ನ ತಾಯಿಗೆ ಫೋನ್ ಮಾಡಿ ಹೇಳಿದೆ. ಮೊದಲ ದಿನದ ಚಿತ್ರೀಕರಣದಲ್ಲಿ ಬೆದರಿ ಹೋಗಿದ್ದೆ. ಖಾಲಿ ಹಾಳೆಯಂತಿದ್ದ ನನ್ನ ವ್ಯಕ್ತಿತ್ವದಲ್ಲಿ ಬಣ್ಣವನ್ನು ತುಂಬಿದವರು ಸ್ವಪ್ನಾ ಅವರು. ಮೂರ್ನಾಲ್ಕು ತಿಂಗಳು ಅವರು ಮಾಡಿದ್ದನ್ನೇ ಕಾಪಿ ಮಾಡಿ ನಟಿಸುತ್ತಿದ್ದೆ. ಅವರು ನನಗೆ ತುಂಬ ಕಲಿಸಿದ್ದಾರೆ. ಹೋಂವರ್ಕ್ ಮಾಡಲು ಹೇಳುತ್ತಿದ್ದರು. ನಾನೂ ಬೇರೆ ಬೇರೆ ಸೀರಿಯಲ್, ನಟನೆಗೆ ಸಂಬಂಧಿಸಿದ ವಿಡಿಯೊಗಳನ್ನು ನೋಡಿ ಕಲಿತಿದ್ದೇನೆ.

■ **ರಾಘವೇಂದ್ರ ಕೆ.**